ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಂ.ನೃ.ನಾ:ಪ್ರ.ಕಾ ಮತ್ತು ವಿ.ಮೇ.ಸ.ಬ:2:2013-14 ದಿನಾಂಕ:08ನೇ ಮೇ 2014

### : ಅಲ್ಪಾವಧಿ ಇ-ಟೆಂಡರ್ :

**ವಿಷಯ:** ಟ್ಯಾಬ್ಲೆಟ್ / ಚಿಕ್ಕಲ್ಯಾಪ್‌ಟಾಪ್ ಖರೀದಿ ಮಾಡಲು ಅಲ್ಪಾವಧಿ ಇ-ಟೆಂಡರ್ ಕರೆಯುವ ಕುರಿತು.

**ಉಲ್ಲೇಖ:** ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು, ಇವರ ಸುತ್ತೋಲೆ ಸಂಖ್ಯೆ:[1] ಮು.ಯೋ.ಕಾ.ಠ.ಬಿ:02:2014-15. ದಿನಾಂಕ:30.08.2013.

2] ಸರ್ಕಾರದ ಆದೇಶ ಸಂಖ್ಯೆ:ಇಡಿ:63:ಯೋಯೋಕ:2013, ದಿನಾಂಕ:12.08.2013.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಹುಮಾನವಾಗಿ ರಾಜ್ಯ ಮತ್ತು ರಾಷ್ಟ್ರಮಟ್ಟ ಪ್ರತಿಭಾಕಾರಂಜಿ ಕಾರ್ಯಕ್ರಮದಲ್ಲಿ ಅತ್ಯುತ್ತಮ ಪ್ರತಿಭೆ ತೋರಿದ ರಾಜ್ಯದ 48 ವಿದ್ಯಾರ್ಥಿಗಳಿಗೆ ಹಂಚಲು ಟ್ಯಾಬ್ಲೆಟ್ / ಚಿಕ್ಕ ಲ್ಯಾಪ್‌ಟಾಪ್‌ಗಳನ್ನು ಇ-ಟೆಂಡರ್ [ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್] ದ್ವಿಲಕೋಟೆ ಮಾದರಿಯಲ್ಲಿ ಖರೀದಿಸಲು ಟೆಂಡರ್ ಆಹ್ವಾನಿಸಿದೆ. [Two cover system]

### [01] ಟೆಂಡರ್ ಕ್ರಮಗಳು:

01. ಟೆಂಡರ್‌ನ್ನು ದ್ವಿಲಕೋಟೆ [Two cover system] ತಾಂತ್ರಿಕ ಮತ್ತು ವಾಣಿಜ್ಯ [Technical and Financial Bid] ಪದ್ಧತಿಯಲ್ಲಿ ನಿಗದಿ ಅಂತಿಮ ದಿನಾಂಕದೊಳಗಾಗಿ ಇ-ಪ್ರೋಕ್ಯೂರ್ ಮೆಂಟ್‌ನಲ್ಲಿ ಸಲ್ಲಿಸಬೇಕಾಗಿದೆ.
02. ಒಟ್ಟು ಖರೀದಿಸುವ ಟ್ಯಾಬ್ಲೆಟ್‌ಗಳ ಸಂಖ್ಯೆ: 48.
03. ಸರ್ಕಾರವು ನಿಗದಿಪಡಿಸಿದ ಅನುದಾನವು ರೂ. 10,00,000/- [ಹತ್ತು ಲಕ್ಷ ರೂ.ಗಳು ಮಾತ್ರ]
04. (1) ಟೆಂಡರ್‌ನ್ನು ಇ-ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ:09.05.2014.
    (2) ಟೆಂಡರ್‌ನ್ನು ಇ-ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ:20.05.2014. 4PM
05. ಟೆಂಡರ್‌ನ್ನು ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ಬಗ್ಗೆ.
    ಅ. ತಾಂತ್ರಿಕ ಟೆಂಡರ್ [Technical Bid] ದಿನಾಂಕ:22.05.2014 4.15PM
    ಆ. ವಾಣಿಜ್ಯ ಟೆಂಡರ್ [Financial Bid] ದಿನಾಂಕ:23.05.2014
06. ಇ.ಎಂ.ಡಿ [E.D.M Amount] ಮೊತ್ತ ರೂ. 20,000/-
07. ಟೆಂಡರ್ ವಾಯಿದೆ ಅವಧಿ [Bid validity] ದಿನಾಂಕ:31.03.2015

### [02] ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳು [Eligibility criteria] ಹಾಗೂ ತಾಂತ್ರಿಕ ಬಿಡ್ ಜೊತೆ ಸಲ್ಲಿಸಬೇಕಾದ ದಾಖಲೆಗಳ ವಿವರ

01. ಚಾಲ್ತಿಯಲ್ಲಿರುವ ಸಂಸ್ಥೆಯ ನೋಂದಣಿ ಪತ್ರದ ಪ್ರತಿ.
02. ಆದಾಯ ತೆರಿಗೆ ನೋಂದಣಿ ಪ್ರಮಾಣ ಪತ್ರ.
03. ಮೌಲ್ಯ ವರ್ಧಿತ ತೆರಿಗೆ [VAT] ನೋಂದಣಿ ಪ್ರಮಾಣ ಪತ್ರ.
04. ಹಿಂದಿನ ಮೂರುವರ್ಷಗಳಲ್ಲಿ [2011-12, 2012-13 ಮತ್ತು 2013-2014] ಸಂಸ್ಥೆಯು ಆದಾಯ ತೆರಿಗೆ ಪಾವತಿಮಾಡಿರುವ ಬಗ್ಗೆ ದಾಖಲೆಗಳು.
05. ಮೇಲ್ಕಂಡ ಸಾಲಿನ ಲೆಕ್ಕಪರಿಶೋಧಕರ ವರದಿ.
06. ಬಿಡ್‌ದಾರರು ಮೇಲ್ಕಂಡ ಮೂರುವರ್ಷಗಳಲ್ಲಿ ಸರ್ಕಾರಿ / ಅರೆಸರ್ಕಾರಿ ಸಂಸ್ಥೆಗಳಿಗೆ ಸರಬರಾಜು ಮಾಡಿರುವ ಅನುಭವ ಹೊಂದಿರಬೇಕು. ಸಂಸ್ಥೆಯ ವಹಿವಾಟು ನಡೆಸಿರುವ ಬಗ್ಗೆ ಸೂಕ್ತ ದಾಖಲೆಗಳು.
07. ಬಿಡ್‌ದಾರರ ಸಂಸ್ಥೆಯನ್ನು ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳು ಕಪ್ಪು ಪಟ್ಟಿಯಲ್ಲಿ ಇಟ್ಟಿರುವುದಿಲ್ಲ ಎಂಬ ಬಗ್ಗೆ ಸ್ವಯಂ ದೃಢೀಕರಣ ಪತ್ರ [ರೂ. 100/-ಗಳ ಇ-ಸ್ಟ್ಯಾಂಪ್ ಮೂಲಕ]

08. ಖರೀದಿ ಸಾಮಗ್ರಿಯ ಗ್ರಾಹಕರ [illegible] [illegible] ಸೀಮಿತವಾಗಿ]

09. ಸರಬರಾಜು ಮಾಡಿದ ಸಾಮಗ್ರಿಯು ತಾಂತ್ರಿಕ ದೋಷಗಳು ಒಂದು ವರ್ಷದ ಒಳಗೆ ಕಂಡುಬಂದಲ್ಲಿ ಅವುಗಳನ್ನು ತಕ್ಷಣ [7ಕೆಲಸದ ದಿನಗಳಲ್ಲಿ] ಬದಲಿಸಿ ನೀಡುವುದು/ ಉಚಿತವಾಗಿ ಸರಿಪಡಿಸಿ ನೀಡುವ ಬಗ್ಗೆ ಪ್ರಮಾಣ ಪತ್ರ [ರೂ. 100/-ಗಳ ಇ-ಸ್ಟ್ಯಾಂಪ್ ಮೂಲಕ]

10. ಬಿಡ್‌ದಾರರು ಬಿಡ್ ಜೊತೆಯಲ್ಲಿ ಇ.ಎಂ.ಡಿ [E.M.D. Amount] ಮೊತ್ತವನ್ನು ಅರ್ಹಬಿಡ್ದಾರರಿಗೆ ಕಾರ್ಯಾದೇಶ ನೀಡಿದ ತಕ್ಷಣವೇ ಉಳಿದ ಬಿಡ್ ದಾರರಿಗೆ ಇ.ಎಂ.ಡಿ[E.M.D. Amount] ಮೊತ್ತವನ್ನು ಇ ಪ್ರೋಕ್ಯೂರ್ ಪೋರ್ಟಲ್ ಮೂಲಕ ಹಿಂದಿರುಗಿಸಲಾಗುವುದು.

11. ಆಯ್ಕೆಯಾದ ಬಿಡ್ದಾರರು ಕಾರ್ಯಾದೇಶ ಪಡೆದ ಒಂದು ವಾರದ ಒಳಗಾಗಿ ಕಾರ್ಯಾದೇಶದ ಒಟ್ಟು ಮೌಲ್ಯದ ಶೇ 5ರಷ್ಟು ಸೇವಾಭದ್ರತೆ ಠೇವಣಿಯನ್ನು ಇ-ಪ್ರೋಕ್ಯೂರ್ ಪೋರ್ಟಲ್ ಮೂಲಕ ಸಲ್ಲಿಸತಕ್ಕದ್ದು. ಹಾಗೂ ಇಲಾಖೆಯೊಂದಿಗೆ ಖರೀದಿ ಕರಾರು ನಿಯಮಗಳಿಗೆ ಒಪ್ಪಂದ ನೀಡಿರುವ ಬಗ್ಗೆ ರೂ. 100/-ರ ಇ-ಸ್ಟ್ಯಾಂಪ್ ಮೂಲಕ ಕರಾರು ಪತ್ರವನ್ನು ಸಿದ್ಧಪಡಿಸಿ ಸಲ್ಲಿಸುವುದು. ತಪ್ಪಿದಲ್ಲಿ ಅಂತಹಾ ಬಿಡ್ದಾರರ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕುವ ಅಧಿಕಾರವು ಖರೀದಿದಾರರಿಗಿರುತ್ತದೆ.

12. ಸರಬರಾಜು ಮಾಡಿದ ಸಾಮಗ್ರಿಗಳನ್ನು ಮಾನ್ಯ ಆಯುಕ್ತರು ನೇಮಿಸಿದ ತಾಂತ್ರಿಕ ವಿಷಯಾಧಿಕಾರಿಗಳಿಂದ ಪರಿಶೀಲಿಸಿ ಅವರು ನೀಡಿದ ವರದಿ ಆಧಾರದ ಮೇಲೆ ಹಣವನ್ನು ಪಾವತಿಸಲಾಗುವುದು.

13. ಸರಬರಾಜು ಮಾಡಿದ ಸಾಮಗ್ರಿಯು ಇಲಾಖೆ ನಿಗದಿಪಡಿಸಿರುವ SPECIFICATION ನಂತೆ ಸರಬರಾಜು ಮಾಡುವುದು ಕಡ್ಡಾಯವಾಗಿರುತ್ತದೆ. ವ್ಯತ್ಯಾಸವಾದಲ್ಲಿ ಸಾಮಗ್ರಿಗಳನ್ನು ಹಿಂಪಡೆದು ಕೊಂಡು ಹೊಸದಾಗಿ ನೀಡುವುದು ಮತ್ತು ಇಲಾಖೆ ವಿಧಿಸುವ ದಂಡವನ್ನು ಸಹ ಪಾವತಿ ಮಾಡಬೇಕಾಗುತ್ತದೆ.

14. ಸಾಮಗ್ರಿಗಳನ್ನು ಕಾರ್ಯದೇಶದ ಜೊತೆಯಲ್ಲಿಯೇ ಯಾವಯಾವ ಜಿಲ್ಲೆಗಳಿಗೆ ಎಷ್ಟು ಎಲ್ಲಿ ವಿತರಿಸಬೇಕು ಎಂಬ ಮಾಹಿತಿಯನ್ನು ನೀಡಲಾಗುತ್ತದೆ. ಅದರಂತೆ ಏಳು ದಿನಗಳ ಒಳಗೆ ವಿತರಿಸಿ ಸಂಬಂದ ಪಟ್ಟವರಿಂದ ಸ್ವೀಕೃತಿಯನ್ನು ಪಡೆದು ಸಲ್ಲಿಸುವುದು. ವಿಳಂಬವಾಗಿ ಸರಬರಾಜು ಮಾಡಿದ ವಸ್ತುವಿಗೆ ಖರೀದಿ ಮೊತ್ತದ ಶೇಕಡಾ 2%ರಷ್ಟು ದಂಡವನ್ನು ವಿಧಿಸಲು ಖರೀದಿದಾರರಿಗೆ ಅಧಿಕಾರವಿರುತ್ತದೆ.

15. ಸರಬರಾಜಿಗೆ ಆಯ್ಕೆಯಾದ ಅರ್ಹಬಿಡ್‌ದಾರರು ಎರಡು ಮಾದರಿ ಸಾಮಾಗ್ರಿಗಳನ್ನು ನೀಡುವುದು. ಅವುಗಳನ್ನು ತನಿಖಾಧಿಕಾರಿಗಳು ಪರಿಶೀಲಿಸಿ, ಇಲಾಖೆ, ನಿಗದಿಪಡಿಸಿದ SPECIFICATION ನಂತೆ ಇದೆ ಎಂದು ಕಂಡುಬಂದನಂತರ ಕಾರ್ಯಾದೇಶವನ್ನು ನೀಡಲಾಗುವುದು.

16. ಈ-ಟೆಂಡರ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರವು ನಿರ್ದೇಶಕರು [ಪ್ರೌಢ ಶಿಕ್ಷಣ] ಇವರಿಗೆ ಇರುತ್ತದೆ.

***[03] ಆರ್ಥಿಕ ಬಿಡ್ ಜೊತೆಯಲ್ಲಿ ಸಲ್ಲಿಸಬೇಕಾದ ದಾಖಲೆಗಳು:***

01. ಕೇವಲ ದರಪಟ್ಟಿ ಸಲ್ಲಿಸತಕ್ಕದ್ದು. ಇದರಲ್ಲಿ ಯೂನಿಟ್ ದರ ಮತ್ತು ಒಟ್ಟು ಮೊತ್ತ ಅಂಕಗಳಲ್ಲಿ ಮತ್ತು ಪದಗಳಲ್ಲಿ ಬರೆದಿರತಕ್ಕದ್ದು.
02. ಯಾವುದೇ ಕಾರಣಗಳನ್ನು ನೀಡದೇ ಟೆಂಡರ್‌ಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ನಿರ್ದೇಶಕರು [ಪ್ರೌಢ ಶಿಕ್ಷಣ], ಇವರಿಗೆ ಕಾಯ್ದಿರಿಸಲಾಗಿದೆ.
03. ಕರ್ನಾಟಕ ತೆರಿಗೆ ಇಲಾಖೆಯ ನೊಂದಣಿ ಪತ್ರ ಹೊಂದಿರಬೇಕು.
04. ಒ.ಇ.ಎಂ Organization in Gartner Quadrant Report ಪಟ್ಟಿಯಲ್ಲಿ ಹೆಸರಿಸಿರಬೇಕು.
05. ಒ.ಇ.ಎಂ ಸಂಸ್ಥೆಯು ವಾರ್ಷಿಕವಾಗಿ ಒಂದು ಕೋಟಿಗಳ ವಹಿವಾಟನ್ನು ಮೊಬೈಲ್ ಮತ್ತು ಟ್ಯಾಬ್‌ಲೇಟ್ ಮುಖಾಂತರ ಸತತ ಎರಡು ವರ್ಷ ನಡೆಸಿರಬೇಕು.

ನಿರ್ದೇಶಕರು [ಪ್ರೌಢ ಶಿಕ್ಷಣ]

[illegible]. \\Typing3server\E\E\Music\61-2014.doc

**ANNEXURE**

**Tablet Specification**

| | |
|---|---|
| 2G Network (India - 900/1800) | EDGE/GPRS 850/900/1800/1900 MHz |
| 3G Network(India - 2100) | HSPA+ 850/900/1900/2100 MHz |
| SIM | Micro-SIM |
| Dimensions | 209.8 x 123.8 x 7.4mm (H x W x D |
| Weight | 316g |
| Type | TFT |
| Size | 8" WXGA (1280 x 800, 16M) TFT or higher |
| Multitouch | Yes |
| Alert types | Vibration, MP3 ringtones |
| Loudspeaker | Yes, with stereo speakers |
| 3.5mm jack | Yes |
| | Dolby Surround sound enhancement |
| Card slot | 16 GB micro SD or higher with expandability up to 64GB |
| Internal | 1.5GB (RAM) or higher |
| GPRS | Yes |
| EDGE | Yes |
| 3G Speed | HSDPA, 21 Mbps; HSUPA, 5.76 Mbps |
| WLAN | Wi Fi 802.11 a/b/g/n (2.4 & 5GHz)<br>Wi Fi Direct, All Share Cast, BT4.0, USB2.0 |
| Bluetooth | v4.0 with A2DP |
| Infrared | Yes |
| HDMI - Out | yes |
| USB | Yes, micro USB v2.0 (MHL), USB Host |
| Primary | 5MP or higher |
| Features | Geo-tagging, touch focus, face detection |
| Video | Yes, 720p@30fps or higher |
| Secondary | 1.3MP or higher |
| OS | Android Jelly Bean 4.2.2 or higher |
| CPU / Processor | Dual-core 1.5 GHz or higher |
| Sensors | Accelerometer, compass, proximity |
| Messaging | Gtalk, Google+, Gmail |
| Browser | Android Browser, Chrome Browser (GMS) |
| GPS | Yes, with A-GPS support and GLONASS |
| Java | Yes, via Java MIDP emulator |
| | - SNS integration |
| | - Organizer |
| | - Image/video editor |
| | - Document viewer |
| | Google Maps |
| | YouTube, Calendar, Google Talk, Picasa |
| | - Voice memo/dial |
| | - Predictive text input (Swype) |
| | MPEG4, H.263, H.264, WMV, DivX (1080p full HD video @ 30fps) |
| | AAC, AMR, IMY, M4A, MP3, OGG, WAV, WMA, 3GP 3GA MP4 FLAC, MID, XMF, MXMF, RTTTL, RTX, OTA ASF |
| | 4450mAh |
| Stand-by | Upto 22 hours |

ನಿರ್ದೇಶಕರು

(ಪ್ರೌಢ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ

ಹೊಸ ಸಾರ್ವಜನಿಕ ಕಛೇರಿ